**ದಿನಾಂಕ: 30.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ ಎಸ್ ಎಚ್ ವಕೀಲರಿಂದ

ನಿಡಿ-20 ಮತ್ತು 21 ರ ಜಮೀನಿನ ಸರ್ವೆ ನಂಬರದಲ್ಲಿಯ ಒಟ್ಟು ಕ್ಷೇತ್ರ 6 ಎಕರೆ. ಅದರ ಪೈಕಿ ತಲಾ 2 ಎಕರೆಯಂತೆ ನಿಡಿ-20 ಮತ್ತು 21 ರಂತೆ ಭಕ್ಷಿಸ ಮಾಡಿದ್ದಾರೆ ಉಳಿದ 2 ಎಕರೆಯನ್ನು ಅವರೇ ಇಟ್ಟುಕೊಂಡಿದ್ದಾರೆ. ಅದೇ ಸರ್ವೆ ನಂಬರದಲ್ಲಿ ಬೇರೆ ಬೇರೆ ಹಿಸ್ಸೆಗಳಿವೆ ಎಂದರೆ ನಿಜ. ಸದರಿ ಹಿಸ್ಸೆಗಳು ನಮ್ಮ ತಂದೆಯ ಹೆಸರಿನಲ್ಲಿ ಕೂಡಾ ಇವೆ ಎಂದರೆ ಸರಿಯಲ್ಲ. ನಿಡಿ-20 ಮತ್ತು 21 ರಲ್ಲಿ ಕಾಣಿಸಿದ ಆಸ್ತಿಗಳು ದಾವಾ ಆಸ್ತಿಗಳಲ್ಲ ಎಂದರೆ ನಿಜ. ನಾನು ನನ್ನ ತಕರಾರು ಪತ್ರದಲ್ಲಿ ಅಥವಾ ಲಿಖಿತ ಹೇಳಿಕೆಯಲ್ಲಿ ನಿಡಿ-20 ಮತ್ತು 21 ರ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ಸದರಿ ಆಸ್ತಿಗಳು ಈ ದಾವೆಗೆ ಅವಶ್ಯಕ ಆಸ್ತಿಗಳು ಅಂತಾ ಪ್ರತಿರಕ್ಷೆ ಮಾಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನಿಡಿ-20 ಮತ್ತು 21 ರ ದಾಖಲಾತಿಗಳಲ್ಲಿ ಸದರಿ ಆಸ್ತಿಗಳು ದಾನ ಮಾಡುವವರೆಗೆ ವಾಟ್ನಿ ಮೂಲಕ ಬಂದಿದೆ ಅಂತಾ ನಮೂದು ಮಾಡಿದೆ ಎನ್ನುತ್ತಾರೆ.

ಸರ್ವೆ ನಂ. 211/4 ರಲ್ಲಿಯ 3 ಎಕರೆ ಜಮೀನು ಇವತ್ತಿಗೂ ಕೂಡಾ ನನ್ನ ಹೆಸರಿನಲ್ಲಿದೆ ಎಂದರೆ ನಿಜ. ಸರ್ವೆ ನಂ. 211/4 ಹಾಗೂ 211/7 ರ ಒಟ್ಟು ಕ್ಷೇತ್ರ 6 ಎಕರೆ 37 ಗುಂಟೆ ನನ್ನ ತಂದೆಯ ಪಾಲಿಗೆ ಈ ಮುಂಚಿನ ವಾಟ್ನಿ ಪ್ರಕಾರ ಬಂದಿದೆ ಎನ್ನುತ್ತಾರೆ. ಸದರಿ ಆಸ್ತಿಗಳು ನನ್ನ ತಂದೆ ಹೆಸರಿಗೆ ಬಂದಿಲ್ಲ ಹಾಗೂ ಬಂದಿವೆ ಅಂತಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 211/7 ರಲ್ಲಿಯ 3 ಎಕರೆ 37 ಗುಂಟೆ ನನ್ನ ತಂದೆ ನನ್ನ ತಾಯಿಗೆ ನೊಂದಾಯಿತ ಭಕ್ಷಿಸ ಮೂಲಕ ಕೊಟ್ಟಿದ್ದಾರೆ ಎಂದರೆ ನಿಜ.

ಸಾಕ್ಷಿಗೆ ಸರ್ವೆ ನಂ. 211/4 ಹಾಗೂ 211/7 ರ ಎರಡು ಉತಾರಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ಒಪ್ಪಿಕೊಂಡಿದ್ದರಿಂದ ಸದರಿ ಉತಾರಗಳನ್ನು ನಿಪಿ-39 ಮತ್ತು 40 ಎಂದು ಗುರುತಿಸಲಾಯಿತು.

ನನ್ನ ತಂದೆ ಬೆಳಗಾಲಪೇಟೆ ಗ್ರಾಮದಲ್ಲಿಯ ಸರ್ವೆ ನಂ. 155/4 ರಲ್ಲಿಯ 3 ಎಕರೆ ಜಮೀನನ್ನು 2 ಸಿ ಪ್ರತಿವಾದಿಗೆ ಭಕ್ಷಿಸ ಮಾಡಿದ್ದು ಆ ಬಗ್ಗೆ ಸದರಿ ಆಸ್ತಿಗೆ ಸದರಿ ಪ್ರತಿವಾದಿಯ ಹೆಸರು ಇದ್ದ ಪಹಣಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ಉತಾರೆಯನ್ನು ನಿಪಿ-41 ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತಃ ಹೇಳುತ್ತಾರೆ ನಿಪಿ-41 ರಲ್ಲಿಯ ಆಸ್ತಿಯನ್ನು ನನ್ನ ತಂದೆ ವಾಟ್ನಿ ಆದ ನಂತರ ಖರೀದಿ ಮಾಡಿದ್ದಾರೆ ಎನ್ನುತ್ತಾರೆ.

ನನ್ನ ತಂದೆಯ ಒಟ್ಟು ಕುಟುಂಬದಲ್ಲಿ ಅಂದರೆ ಅವರು ಮತ್ತು ಅವರ ಸಹೋದರರ ಮಧ್ಯ ಇವತ್ತಿನವರೆಗೂ ಕಾನೂನು ಪ್ರಕಾರ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮತ್ತು ನನ್ನ ಸಹೋದರರರ ಮಧ್ಯ ವಾಟ್ನಿ ಆಗಿಲ್ಲ ಎಂದರೆ ಸಾಕ್ಷಿಯು ವಾಟ್ನಿಯಾಗಲು ಆಸ್ತಿ ಇಲ್ಲ ಎನ್ನುತ್ತಾರೆ. ವಾಟ್ನಿಯಾಗಲು ಆಸ್ತಿ ಇರುವುದಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 155/7 ರಲ್ಲಿಯ 3 ಎಕರೆ ಜಮೀನನ್ನು ನನ್ನ ತಂದೆ 2 ಇ ಪ್ರತಿವಾದಿಗೆ ನೊಂದಾಯಿತ ಭಕ್ಷಿಸ ಮಾಡಿದ್ದಾರೆ ಎಂದರೆ ನಿಜ. ಆ ಬಗ್ಗೆ ಸದರಿ ಆಸ್ತಿಯ ಪಹಣಿಯಲ್ಲಿ ಈಗ 2 ಇ ಪ್ರತಿವಾದಿಯ ಹೆಸರು ಏರಿದೆ ಅಂತಾ ಒಂದು ಆರ್ ಟಿ ಸಿ ಪಹಣಿಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿದ್ದರಿಂದ ಸದರಿ ಆರ್ ಟಿ ಸಿ ಪಹಣಿಯನ್ನು ನಿಪಿ-42 ಎಂದು ಗುರುತಿಸಲಾಯಿತು.

ನಿಡಿ-20 ಮತ್ತು 21 ರ ದಾಖಲಾತಿಗಳನ್ನು ನಾವು ನಮ್ಮ ಪ್ರತಿರಕ್ಷೆಯನ್ನು ಸಾಬೀತು ಮಾಡಲು ಈ ಕೇಸಿಗೊಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ 2 ಸಿ,ಡಿ ಮತ್ತು ಇ ಆಸ್ತಿಗಳನ್ನು ನಾನು ಮತ್ತು 6 ನೇ ಪ್ರತಿವಾದಿ ದಾವೆ ಚಾಲ್ತಿಯಲ್ಲಿರುವಾಗ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಆದರೆ ನಾನು ಮಾತ್ರ ಮಾರಾಟ ಮಾಡಿದಾಗ ಯಾವುದೇ ದಾವೆ ಚಾಲ್ತಿಯಲ್ಲಿರಲಿಲ್ಲ ಎನ್ನುತ್ತಾರೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ವಕೀಲರು ಮೇಲಿನ ಪಾಟೀ ಸವಾಲನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುತ್ತಾರೆ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

(ಶ್ರೀ. ಮಹೇಶ ಎಸ್. ಪಾಟೀಲ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್